# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/04/2020-21 ದಿನಾಂಕ : 21/11/2020

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 21/11/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿ /ನೌಕರರು

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ ಲಕ್ಷ್ಮೀಕಾಂತ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ರಮೇಶ್ ಬಾಬು, ಉಪ ಅರಣ್ಯ ವಲಯ ಸಂರಕ್ಷಣಾಧಿಕಾರಿ
6. ಶ್ರೀ ಭೂಷಣ್ ರಾಜು, ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ
7. ಶ್ರೀ ನಾರಾಯಣಸ್ವಾಮಿ, Livestoke Officer
8. ಶ್ರೀಮತಿ ಅಂಜನಾ ದೇವಿ, ಅರಕ್ಷಕ ಠಾಣೆ
9. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
10. ಕು॥ ಕಾವ್ಯ, ಸಹಾಯಕ ಅಭಿಯಂತರರು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಕು॥ ಕಾವ್ಯ, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು**

ರಾಜೀವ್ ಗಾಂಧಿನಗರ, ಎನ್.ಟಿ.ಐ ಬಡಾವಣೆ, ಹೆಚ್.ಎಂ.ಟಿ ಬಡಾವಣೆ, ಆನಂದ ಬಡಾವಣೆ ಹಾಗೂ ಇತರೆ ಬಡಾವಣೆಗಳಲ್ಲಿ ಮನೆಗೆ ಅಡ್ಡಲಾಗಿ ಬೆಳಕಿಗೆ ತೊಂದರೆಯಾಗುವಂತೆ ಬೆಳೆದಿರುವ ರೆಂಬೆ ಕೊಂಬೆಗಳನ್ನು ಟ್ರಿಮ್ ಮಾಡಲು, ಬೆಸ್ಕಾಂ ರವರು ಟ್ರಿಮ್ ಮಾಡಿ ಅಲ್ಲಿಯೇ ಬಿಟ್ಟು ಹೋದ ರೆಂಬೆಕೊಂಬೆಗಳನ್ನು ತೆರವುಗೊಳಿಸಲು, ಒಣಗಿರುವ ಮರವನ್ನು ತೆರವುಗೊಳಿಸಲು, ಬೃಹದಾಕಾರವಾಗಿ ಬೆಳೆದಿರುವ ಮರದಲ್ಲಿ ಗೆದ್ದಲು ಇರುವುದರಿಂದ ಹುಳ ತಿಂದು ಮರದ ರೆಂಬೆ ಕೊಂಬೆಗಳು ಯಾವ ಸಮಯದಲ್ಲಿ ಬೇಕಾದರೂ ಬೀಳುವ ಸಂಭವವಿರುವುದರಿಂದ ಪರಿಶೀಲಿಸಲು ಕೋರಿರುತ್ತಾರೆ.

ನೋಡೆಲ್ ಅಧಿಕಾರಿ ರವರು ಪ್ರತಿ ದಿನ ವಿದ್ಯಾರಣ್ಯಪುರ ವ್ಯಾಪ್ತಿಯ ಬಡಾವಣೆಗಳಲ್ಲಿರುವ ಮರಗಳನ್ನು ಸರ್ವೇ ಮಾಡಿ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಲು ತಿಳಿಸಿರುತ್ತಾರೆ.

**ಶ್ರೀ ರಮೇಶ್ ಬಾಬು, ಉಪ ಅರಣ್ಯ ವಲಯ ಸಂರಕ್ಷಣಾಧಿಕಾರಿ:-** ಯಾವುದೇ ಹಸಿ ಮರ ತೆಗೆಯಲು ಅವಕಾಶವಿರುವುದಿಲ್ಲ, 60.00 ರಿಂದ 70.00 ಸೆಂ.ಮೀ ವರೆಗಿನ ಮರಗಳನ್ನು ಕತ್ತರಿಸಲು ಅಥವಾ ಟ್ರಿಮ್ ಮಾಡಲು ಅನುಮತಿ ಕಡ್ಡಾಯವಾಗಿರುತ್ತದೆ ಎಂದು ತಿಳಿಸುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ನಿಯಮಾನುಸಾರ ಕ್ರಮವಹಿಸುತ್ತೇನೆಂದು ತಿಳಿಸುತ್ತಾರೆ.

ಹೆಚ್.ಎಂ.ಟಿ ಲೇಔಟ್, 3ನೇ ಬ್ಲಾಕ್ ಹಲವಾರು ಕಡೆಗಳಲ್ಲಿ ಕಾವೇರಿ ನೀರು ಪೂರೈಕೆಯಾಗುತ್ತಿರುವುದಿಲ್ಲ, ಒಳಚರಂಡಿ ಬ್ಲಾಕ್ ಆದಾಗ ಎಷ್ಟು ಬಾರಿ ದೂರು ನೀಡಿದರೂ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಬರದೆ ಇರುವುದರಿಂದ ಒಳಚರಂಡಿ ಬ್ಲಾಕ್ ತೆರವುಗೊಳಿಸುವ ಕಾರ್ಯ ಸಮರ್ಪಕವಾಗಿರುವುದಿಲ್ಲ, ಬಿ.ಇ.ಎಲ್ ಬಡಾವಣೆಯಲ್ಲಿ ವಾರಕ್ಕೆ ಎರಡು ಬಾರಿ ನೀರು ಸರಬರಾಜಾಗುತ್ತಿದ್ದು, ವಿದ್ಯುತ್ ಸಮಸ್ಯೆಯಿರುವುದರಿಂದ ಒಂದು ದಿನ ಬೆಳಿಗ್ಗಿನ ಪಾಳಿಯಲ್ಲಿ ಇನ್ನೊಂದು ದಿನ ಸಂಜೆಯ ಪಾಳಿಯಲ್ಲಿ ನೀರು ಪೂರೈಸಲು ಕೋರಿರುತ್ತಾರೆ. ದುರ್ಗಾ ಬಡಾವಣೆ 2ನೇ ಅಡ್ಡರಸ್ತೆಯಲ್ಲಿ ಕೊಳವೆ ಬಾವಿಯ ವೆಚ್ಚವನ್ನು ಭರಿಸುತ್ತಿದ್ದರೂ ಸಹ ನೀರು ಪೂರೈಕೆಯಾಗುತ್ತಿರುವುದಿಲ್ಲ.

**ಕು॥ ಧನಲಕ್ಷ್ಮಿ, ಸಹಾಯಕ ಅಭಿಯಂತರರು** ವಾಲ್‌ಮೆನ್ ಬದಲಾವಣೆಗೊಂಡಿರುವುದರಿಂದ ಸಮಸ್ಯೆಯಾಗಿದ್ದು, ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲಾಗುವುದು.

ನಂಜಪ್ಪ ಸರ್ಕಲ್‌ನಿಂದ ತಿಂಡ್ಲುಗೆ ಹೋಗುವ ರಸ್ತೆಯ ಬೃಹತ್ ನೀರು ಗಾಲುವೆಯಲ್ಲಿ ಮಳೆ ಬರದಿದ್ದರೂ ಸಹ ಒಳಚರಂಡಿ ನೀರು ಹರಿಯುತ್ತಿರುವುದಾಗಿ ದೂರಿರುತ್ತಾರೆ.

**ನೋಡೆಲ್ ಅಧಿಕಾರಿ:** ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಬಿಬಿಎಂಪಿ ರವರು ವಾರಕ್ಕೆ 2 ಬಾರಿ ಜಂಟಿ ತಪಾಸಣೆ ಕೈಗೊಂಡು ಒಳಚರಂಡಿ ನೀರನ್ನು ಚರಂಡಿಗಳಿಗೆ ಬಿಟ್ಟಿರುವ ಮನೆಗಳನ್ನು ಪರಿಶೀಲಿಸಿ ಒಳಚರಂಡಿ ಕೊಳವೆಗೆ ಸಂಪರ್ಕ ನೀಡುವಂತೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

**ಕ್ರಮ :- ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ/ಬಿಬಿಎಂಪಿ**

ನರಸೀಪುರ ಕೆರೆಯಲ್ಲಿ ಒಳಚರಂಡಿ ನೀರನ್ನು ಬಿಟ್ಟಿರುವುದಾಗಿ ದೂರು ನೀಡಿರುತ್ತಾರೆ.

**ಕ್ರಮ : ಕೆರೆಗಳ ವಿಭಾಗ**

ಎನ್.ಟಿ.ಐ ಲೇಔಟ್, ಹೆಚ್.ಎಂ.ಟಿ ಲೇಔಟ್ 2ನೇ ಬ್ಲಾಕ್, ಸೋಮಣ್ಣ ಗಾರ್ಡನ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳ ಅಂತರ ಹೆಚ್ಚಾಗಿರುವುದರಿಂದ ರಾತ್ರಿಯ ಸಮಯದಲ್ಲಿ ಕತ್ತಲೆ ಆವರಿಸಿರುವುದರಿಂದ ಸರಿಪಡಿಸಲು, ಬೀದಿ ದೀಪಗಳಿಗೆ ಟೈಮರ್ ಅಳವಡಿಸಲು, ತಿಂಡ್ಲು ಸರ್ಕಾರಿ ಆಸ್ಪತ್ರೆ ಎದುರು ಟ್ರಾನ್ಸ್‌ಫಾರ್ಮರ್ ಸಮಸ್ಯೆ, ಸುಟ್ಟಿರುವ ವಿದ್ಯುತ್ ಕೇಬಲ್‌ಗಳನ್ನು ತೆರವುಗೊಳಿಸಿರುವುದಿಲ್ಲವೆಂದು ದೂರಿರುತ್ತಾರೆ.

**ಕ್ರಮ: ಬೆಸ್ಕಾಂ**

ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುತ್ತದೆ, ಕೆನರಾ ಬ್ಯಾಂಕ್ ಬಡಾವಣೆ, ಸಪ್ತಗಿರಿ ಬಡಾವಣೆ, ದುರ್ಗಾ ಬಡಾವಣೆ, ಹೆಚ್.ಎಂ.ಟಿ ಲೇಔಟ್, ಎನ್.ಟಿ.ಐ ಲೇಔಟ್ ಇನ್ನಿತರೆ ಬಡಾವಣೆಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣೆ ಸಮರ್ಪಕವಾಗಿರುವುದಿಲ್ಲ, ಕಸದ ಗಾಡಿಯವರು ಕಡಿಮೆ ಲೌಡ್ ಸ್ಪೀಕರ್ ಇಟ್ಟು ಶಬ್ದವನ್ನು ಮಾಡುತ್ತಿರುವುದರಿಂದ ಕಸದ ಗಾಡಿಯವರು ಬರುವ ಸೂಚನೆ ಗೊತ್ತಾಗುವುದಿಲ್ಲ ಹಾಗೂ ಗಾಡಿಯ ವೇಗ ಹೆಚ್ಚಿರುವುದರಿಂದ ಮನೆಯಿಂದ ತ್ಯಾಜ್ಯ ವಿಲೇವಾರಿಯಾಗದೆ ಹಾಗೆಯೇ ಉಳಿದಿರುತ್ತದೆ, ವಿದ್ಯಾರಣ್ಯಪುರ ವ್ಯಾಪ್ತಿಯ ಅಡ್ಡರಸ್ತೆಗಳಲ್ಲಿ ಕಸ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿರುವುದಿಲ್ಲ, ಗುಡಿಸಿದ ಕಸವನ್ನು ತೆರವುಗೊಳಿಸಿರುವುದಿಲ್ಲವೆಂದು ದೂರಿರುತ್ತಾರೆ.

**ಕ್ರಮ: ಸ.ಕಾ.ಅ, ಘನತ್ಯಾಜ್ಯ ನಿರ್ವಹಣಾ ವಿಭಾಗ**

**ನೋಡಲ್ ಅಧಿಕಾರಿ:** ಕೋವಿಡ್ –19 ರೋಗದ ತಡೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ನಾಗರೀಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದ್ದು, ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದವರ ಸಹಕಾರದೊಂದಿಗೆ ಬಡಾವಣೆಯ ಪ್ರತಿಯೊಬ್ಬ ನಾಗರೀಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಕೋವಿಡ್–19 ರೋಗವನ್ನು ನಿಯಂತ್ರಣದಲ್ಲಿಡಲು ಅನುಕೂಲವಾಗುತ್ತದೆ.

ಶ್ರೀ ಶಿವಕುಮಾರ್ ಗೌಡರ್, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Division
BBMP, Bangalore - 97

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.